Doc-482
T-P-2

Reg No B G 155 22 — 5 — 72

55th Year of Publication ‘Satyavadi’ daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters

ರಾಜ್ಯದಲ್ಲಿ ಪ್ರಥಮ
ಸ್ವಾತಂತ್ರ್ಯ
ಸುವರ್ಣ ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಸೆಸೆ

ಪಾನನಿರೋಧಕ್ಕಾಗಿ ದೇಶಾದ್ಯಂತ ಚಳುವಳಿ

ಮುಖ್ಯಮಂತ್ರಿಗಳ ಉದಾರದಾನ

ಆಳ್ವಾರ್ — ರಾಜಸ್ಥಾನದ ಮುಖ್ಯಮಂತ್ರಿಯವರು, ಜೋಧಪುರದಲ್ಲಿನ ತಮ್ಮ ಪಿತ್ರಾರ್ಜಿತ ಮನೆಯನ್ನು ಆರ್ಯಸಮಾಜಕ್ಕೆ ದಾನಮಾಡಿದರು — ಮುಖ್ಯಮಂತ್ರಿಗಳ ತಾತ ಹೈಜುಲ್ಲಾ ಖಾನರು ಜೋಧಪುರದ ದಿವಾನರಾಗಿದ್ದಾಗ ಸ್ವಾಮಿ ದಯಾನಂದರು ಅಲ್ಲಿ ವಾಸ್ತವ್ಯವಾಗಿದ್ದರು.

★

ಯುದ್ಧ ಸಿದ್ಧತೆ

ನವದೆಹಲಿ — ಚೀನೀಯರು ಟಿಬೆಟ್ಟಿನಲ್ಲಿ ತಮ್ಮ ಯುದ್ಧ ಸಿದ್ಧತೆ ಮುಂದುವರಿಸುತ್ತಿರುವರೆನ್ನಲಾಗಿದೆ

★

ಭುಟ್ಟೋರವರು

ನವದೆಹಲಿ — ಭಾರತವನ್ನು ಲೆಕ್ಕಿಸದೆ ಯುದ್ಧ ಖೈದಿಗಳ ಬಿಡುಗಡೆಗೆ ಅಧ್ಯಕ್ಷ ಭುಟ್ಟೋ ಬಂಗ್ಲಾದೇಶದೊಡನೆ ನೇರ ಸಂಬಂಧ ಹೊಂದಲು ಪ್ರಯತ್ನಿಸುತ್ತಿರುವರೆಂದು ಗೊತ್ತಾಗಿದೆ.

★

ಶಾಷ್ಟ್ರೀಕರಣ ವಿರೋಧ

ಅನಂತಪುರ — ರಾಯಲ್‌ಸೀಮೆಯಲ್ಲಿಯ ಬಸ್ ಮಾರ್ಗಗಳ ರಾಷ್ಟ್ರೀಕರಣವನ್ನು ರಾಯಲ್‌ಸೀಮೆಯ ಉಪ ಮುಖ್ಯಮಂತ್ರಿ ಮತ್ತು ಇತರ ಮಂತ್ರಿಗಳೂ ಸೇರಿ 76 ಶಾಸಕರು ವಿರೋಧಿಸಿದ್ದಾರೆ.

★

ಯಾತ್ರಿಕರ ಪ್ರತಿಭಟನೆ

ಡೇರಾಡೂನ್ — ಬದ್ರಿನಾಥ್‌ಗೆ ಹೊರಟ ನೂರುಗಟ್ಟಲೆ ಯಾತ್ರಿಕರು ತಮ್ಮ ಪ್ರಯಾಣಕ್ಕೆ ಸರಕಾರ ಸೂಕ್ತ ಏರ್ಪಾಡು ಮಾಡದಿರುವುದನ್ನು ಪ್ರತಿಭಟಿಸಿ ಹೃಷಿಕೇಷ್‌ದಲ್ಲಿನ ಬೀದಿಗಳಲ್ಲಿ ಪೆರವಣಿಗೆ ನಡೆಸಿದರು

ಪಾನನಿರೋಧಕ್ಕಾಗಿ ಚಳುವಳಿ

ಆಳ್ವಾರ್ — ದೇಶದಲ್ಲಿ ಪೂರ್ಣ ಪಾನನಿರೋಧವನ್ನು ಈ ವರ್ಷದ ಅಕ್ಟೋಬರು 2 ಗಾಂಧೀಜೀ ಜನ್ಮದಿನೋತ್ಸವದೊಳಗೆ ಜಾರಿಗೆ ತರದಿದ್ದರೆ, ಚಳುವಳಿ ಹೂಡುವುದಾಗಿ ಆರ್ಯಸಮಾಜದ 11 ನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ನಿರ್ಧರಿಸಲಾಯಿತು.

★

ಖೋತಾ ಬಡ್ಜೆಟ್

ಬೆಂಗಳೂರು — ಜೂನ್ ತಿಂಗಳಲ್ಲಿ ಮಂಡಿಸಲಾಗುವ ರಾಜ್ಯದ 72–73 ರ ಬಡ್ಜೆಟ್ ಖೋತಾದ್ದಾಗಿರುವ ಸಂಭವವಿದೆ.

○

ಒಳ್ಳೇ ಯೋಚನೆ

ಬೆಂಗಳೂರು — ಹಣ ಖರ್ಚಾಗುತ್ತಿರುವ ಹಿರಿಯ ಪ್ರಾಜೆಕ್ಟುಗಳ ಸಾಮರ್ಥ್ಯದ ವಿಷಯವನ್ನು ಪರೀಕ್ಷಿಸಲು ಸರಕಾರ ಯೋಚಿಸಿದೆ.

★

ಪಾಕಿಸ್ತಾನ ಮ್ಯೂಜಿಯಂನಲ್ಲಿ

ನವದೆಹಲಿ — ಕರಾಚಿಯಲ್ಲಿನ ಪಾಕಿಸ್ತಾನ ರಾಷ್ಟ್ರೀಯ ಮ್ಯೂಸಿಯಂಗೆ 5 ಪುರಾತನ ಹಿಂದೂ ಧರ್ಮಗ್ರಂಥಗಳನ್ನು ಸೇರಿಸಲಾಗಿದೆ — ಮ್ಯೂಜಿಯಂನಲ್ಲಿ 33 ಅಪರೂಪ ಕೈಬರಹ ಗ್ರಂಥಗಳನ್ನೂ 34 ಐತಿಹಾಸಿಕ ಕಾಗದಪತ್ರಗಳನ್ನೂ ಶೇಖರಿಸಲಾಗಿದೆ.

★

ದಿವ್ಯವಾಣಿ

ಮೂರು ಲೋಕಗಳನ್ನು ಗೆದ್ದುಕೊಳ್ಳುವ ಸಾಮರ್ಥ್ಯ ಶೀಲದಲ್ಲಿದೆ ; ಜಗತ್ತಿನಲ್ಲಿ ಶೀಲವಂತನಿಗೆ ಅಸಾಧ್ಯವಾದುದೇನೂ ಇಲ್ಲ. — ಸುಭಾಷಿತ

★ ಉತ್ತರಪ್ರದೇಶದ ಭಿಂಡದಲ್ಲಿ ರೈಲ್ವೆ ಕ್ರಾಸಿಂಗ್‌ನಲ್ಲಿ ಒಂದು ಬಸ್ ಉರುಳಿ ಬೆಂಕಿ ಹತ್ತಿಕೊಂಡು 40 ಮಂದಿ ಪ್ರಯಾಣೀಕರು ಸುಟ್ಟುಹೋದರು.

ಮೈಸೂರು ಪಿ. ಡಬ್ಲ್ಯೂ. ಡಿ.

ಟೆಂಡರ್‌ಪ್ರಕಟಣೆ

ನಂ. 8 / 72-73 /ಡಿಟಿ
8–5–1972

ಈ ಕೆಳಗೆಕಂಡ ಕೆಲಸಗಳಿಗಾಗಿ ಕಾಲಂ ನಂ 4 ರಲ್ಲಿ ನಮೂದಿಸಿರುವ ಸೂಕ್ತ ವರ್ಗದ ರಿಜಿಸ್ಟರ್ ಆದ ಕಂಟ್ರಾಕ್ಟರುಗಳಿಂದ ವಿಧಾಯಕವಾದ ಫಾರಂಗಳಲ್ಲಿ ದ್ವಿಪ್ರತಿಗಳಲ್ಲಿ ಮೊಹರಾದ ಟೆಂಡರುಗಳನ್ನು ಆಹ್ವಾನಿಸಲಾಗಿದೆ ; ಮತ್ತು ಚಾಮರಾಜನಗರದಲ್ಲಿರುವ, ಚಾಮರಾಜನಗರ ವಿಭಾಗದ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು ಗುರುವಾರ 1 ನೇ ಜೂನ್ 1972 ರ ಮಧ್ಯಾಹ್ನ 4 ಗಂಟೆಗಳವರೆಗೆ ಅವನ್ನು ಸ್ವೀಕರಿಸುವರು. ಸಾಧ್ಯವಾದರೆ ಅದೇ ದಿನ, ಹಾಜರಿರಬಯಸುವ ಟೆಂಡರುದಾರರ ಅಥವಾ ಅವರ ಪ್ರತಿನಿಧಿಗಳ ಎದುರಿಂದ ಅವನ್ನು ಒಡೆಯಿಸಲಾಗುವುದು. 23 ನೇ ಮೇ 1972ರಿಂದ 31 ನೇ ಮೇ 1972 ರವರೆಗೆ ಕೆಲಸದ ವೇಳೆಗಳಲ್ಲಿ ಕೆಲಸದ ಎಲ್ಲಾ ದಿನಗಳಲ್ಲಿ ಫಾರಂ ಮಾರಾಟಕ್ಕೆ ವಿಧಾಯಕ ಮಾಡಿರುವ ಹಣವನ್ನು ಪಾವತಿಮಾಡಿದಲ್ಲಿ (ವಾಪಸು ಮಾಡಲಾಗುವುದಿಲ್ಲ) ಖಾಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು. ಯಾವ ಕಾರಣಗಳನ್ನೂ ಕೊಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನೂ ನಿರಾಕರಿಸುವ ಹಕ್ಕು ತಕ್ಕ ಅಧಿಕಾರಿಯವರಿಗೆ ವಿಧಿಸಲಾಗಿದೆ. ಕೆಲಸದ ಎಲ್ಲಾ ದಿನಗಳಲ್ಲಿ ಕೆಲಸದ-ವೇಳೆಗಳಲ್ಲಿ ಚಾಮರಾಜನಗರ ವಿಭಾಗದ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರ ಕಛೇರಿಯಿಂದ ಹೆಚ್ಚು ವಿವರಗಳನ್ನು ಪಡೆಯಬಹುದು.

1 ಕೆಲಸದ ಹೆಸರು :
ಕೊಳ್ಳೇಗಾಲ ತಾಲ್ಲೂಕಿನ ಶ್ರೀ ಎಂ. ಎಂ. ಬೆಟ್ಟಗಳಲ್ಲಿ ಮೈಸೂರು ಜಿಲ್ಲಾ ತಾಲ್ಲೂಕ್ ಬೋರ್ಡ್‌ಗಳಿಂದ ದೊ

ಘರ್ಷಣೆ

ಚಂಡೀಘರ್ — ಪಂಜಾಬಿನ ಖೈರಾ ಭಾಗಗಳಲ್ಲಿ ಪಾಕ್ ಸೈನಿಕರಿಗೂ ಗಡಿ ಕಣ್ಣಾ ಪಡೆಯವರಿಗೂ ಘರ್ಷಣೆಯಾಗಿ ಇಬ್ಬರು ಪಾಕ್ ಸೈನಿಕರೂ ಒಬ್ಬ ಭರ್ಷನ್ನನೂ ಸತ್ತರು.

ಮಹಾರಾಣಿಯವರು

ಮೈಸೂರು — ಶ್ರೀಪಾದ್ಮಾರಾಜ ಶ್ರೀ ಜಯಚಾಮರಾಜ ಒಡೆಯರವರ ಹಿರಿಯ ಪತ್ನಿ ಶ್ರೀಮತಿ ಪತ್ಯಪ್ರೇಮಕಾಮಾರಿಯವರು ನಿನ್ನೆ ಭೂಕಂಪಕ್ಕೆ ತುತ್ತಾದ ಮಂಡ್ಯ ಜಿಲ್ಲಾ ದೊಡ್ಡೇಗೌಡನಕೊಪ್ಪಲಿಗೆ ಭೇಟಿ ಕೊಟ್ಟು ಸಂಕಟಕ್ಕೀಡಾಗಿರುವವರಿಗೆ ಸಹಾನುಭೂತಿ ವ್ಯಕ್ತಪಡಿಸಿ, ಸರಕಾರದ ಪರಿಹಾರ ಕಾರ್ಯವನ್ನು ಪ್ರಶಂಸಿಸಿದರು; ವಾಪಸ್ಸು ಬರುವಾಗ ಬನ್ನೂರಿನ ಶ್ರೀ ರಾಮಮಂದಿರಾಲಯಕ್ಕೆ ಭೇಟಿಕೊಟ್ಟರು.

★ ನವದೆಹಲಿ — ಸ್ವೀಡ್ ಭಾರತಕ್ಕೆ ರೂ 3 ಕೋಟಿ ಬೆಲೆಯ ಕಾಗದ ಕೊಡುವ ಒಪ್ಪಂದವಾಗಿದೆ.

ಡ ಛತ್ರ ನಿರ್ಮಾಣಮಾಡುವುದು.
3 ನೇ ಕಾಲಂ
2 ಟೆಂಡರ್‌ಗೆ ಇಟ್ಟಿರುವ ಅಂದಾಜು ಮೊತ್ತ :
ರೂ. 162542
3 ಇ ಎಂ. ಡಿ.
ರೂ. 4064
4 ಟೆಂಡರ್ ಕೊಡಬಹುದಾದ ಕಂಟ್ರಾಕ್ಟರ್ ವರ್ಗ :
1 ರಿಂದ 3
5 ಟೆಂಡರ್ ಫಾರಂ ದರ :
ರೂ. 10–30
6 ಮುಗಿಸಲು ಕಾಲಾವಧಿ :
18 ತಿಂಗಳು

ಸಹಿ/– ಕೆ. ಶ್ರೀನಿವಾಸಮೂರ್ತಿ
ಎಕ್ಸಿಕ್ಯುಟಿವ್ ಇಂಜಿನಿಯರ್
ಚಾಮರಾಜನಗರ ವಿಭಾಗ

ವಿಗ್ರಹದಿಂದ ರಜಸ್ವಲಾ ರಕ್ತ

ತ್ರಿವೇಂದ್ರಂ— ಆಲಪ್ಪೆ ಜಿಲ್ಲಾ ಚಿಂಗನೂರಿನ ಪ್ರಖ್ಯಾತ ಶ್ರೀ ಸಾ ಪ ಕ ತಿ ದೇವಾಲಯದ ಪಾರ್ವತಿ ಶಿಲಾ ವಿಗ್ರಹದಿಂದ, ನಾಲ್ಕು ತಿಂಗಳ ನಂತರ ರಜಸ್ವಲಾ ರಕ್ತವು ಸೋರುತ್ತಿದೆ – ಈ ಶುಭ ಸಂದರ್ಭವನ್ನು ವೈಭವವಾಗಿ ತಾ। 22 ರಂದು ನೆರವೇರಿಸಲು ದೇವಾಸನಂ ಮಂಡಲಿ ವಿಶೇಷ ಆರತಿ ಏರ್ಪಡಿಸಿದೆ.

ಶ್ರೀ ಶಿವಾಜಿ ಪ್ರತಿಮೆ ಪ್ರತಿಷ್ಠೆ

ಬಿಜಾಪುರ— ಶಿವಾಜಿಯು, ಚಕ್ರಾಧಿಪತ್ಯ ಸ್ಥಾಪಿಸಿದ್ದಕ್ಕಾಗಿ ಗೌರವಿಸಲಾಗುತ್ತಿಲ್ಲ. ಆದರೆ ಅನ್ಯಾಯ ಮತ್ತು ಮಾನವೀಯ ಹಕ್ಕನ್ನು ಅಡಗಿಸುವವರ ವಿರುದ್ಧ ದಂಗೆಯೇಳಲು ಸಾಧಾರಣ ಮನುಷ್ಯನಲ್ಲಿ ಧೈರ್ಯ ಸಾಹಸ ಬೋಧಿಸಿದ್ದಕ್ಕಾಗಿ ಗೌರವಿಸಲಾಗುತ್ತಿದೆ ಎಂದು ಅರ್ಥಸಚಿವರು ಶ್ರೀ ಎಂ ವೈ. ಘೋರ್ಪಡೆಯವರು ಮಂಗಳ ವಾದ್ಯಮಿಕ ಶಾಲೆಯಲ್ಲಿ ಶಿವಾಜಿ ಪ್ರತಿಮೆ ಪುನರ್ ಸ್ಥಾಪನಾ ಸ್ಥಾಪನಾ ಸಮಾರಂಭದಲ್ಲಿ ಹೇಳಿದರು – ಮಂಗಳ ಪಾತನಾಡುವವರು ಕನ್ನಡವನ್ನು ಕಲಿಯುವಂತೆ ವಿನಂತಿಸಿದರು.

ಜಾಹಿರಾತುಗಳಿಗಾಗಿ ಖರ್ಚು

ಬೆಂಗಳೂರು– ಈಗ ದೇಶದಲ್ಲಿ ವಾಣಿಜ್ಯ ಜಾಹಿರಾತುಗಳಿಗೆ ರೂ. 60 ಕೋಟಿ ಖರ್ಚಾಗುತ್ತಿದೆ ಎಂದೂ, 320 ಜಾಹಿರಾತು ಸಂಸ್ಥೆಗಳಿರುವುವೆಂದೂ, ಪ್ರಥಮ ಜಾಹಿರಾತು ಸಂಸ್ಥೆಯನ್ನು 1905 ರಲ್ಲಿ ದತ್ತಾರಾಂ ಕಂಪೆನಿಯವರು ಸ್ಥಾಪಿಸಿದರೆಂದೂ ಬೆಂಗಳೂರು ಉತ್ತರ ರೋಟರಿ ಕ್ಲಬ್‌ನಲ್ಲಿ ಶ್ರೀ ಟಿ. ಕೆ. ಮೆನನ್ ಹೇಳಿದರು.

ವುಡ್‌ಲಾಂಡ್ 19-5-72ರಿಂದ ಅಮೋಘ 3ನೇ ವಾರ

.... ಚಿತ್ತಾಕರ್ಷ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರೀಬಾಯಿ
ನಿರ್ದೇಶನ : ರಾಜಶ್ರೀ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಪೂರ್ಣಾವಧಿ ಅಕಂಪುತಿ

ಅಪೆರಾ 2 ನೇ ವಾರ

.... ಮನಮೋಹಕ ಕನ್ನಡ ಚಿತ್ರ ....

ಭಲೇ ರಾಣಿ

ನಟವರ್ಗ— ಉದಯಕುಮಾರ್, ಶ್ರೀನಾಥ್, ಅಶ್ವತ್ಥ್, ದಿವಂಗತ ನಾಗಪ್ಪ
ಶಕ್ತಿಪ್ರಸಾದ್, ರಮೇಶ್, ತೂಗುದೀಪ ಶ್ರೀನಿವಾಸ್, ಪಂಡರೀಬಾಯಿ
ದೇವಿಕ, ರಮಾದೇವಿ, ಬೇಬಿ ರಾಣಿ, ವೈ ಸೂರಿಪ ಹೈ ॥ ಮೂಗ
ದಿನ 3 ಆಟಗಳು

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

Edited Printedand Published by Dharmapracharanirata
M S Krishna Rao (Propretor) at the Satvavadi Press
Chamarajapuram Mysore 4

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ '
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

ಆನೆ - ತಾಯಿ ಮಗು

Protect the Cow

Contribute Liberally
to the National Defence Fund

Help The Gorakshana



— Humanitarian Propoganda Monthly .....

Quality Printing Neat Binding

Lakshminarasimha Press

Sivarampet, Mysore

SHAKTI
SUDHA

A Superb Tonic